# ಒಂದನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಂಡ್ಯ.

## ಎಸ್. ಸಿ. ನಂ: 16/2022

ಪಿರ್ಯಾದುದಾರರು ಮಂಡ್ಯ ಪಶ್ಚಿಮ ಪೋಲೀಸ್ ಠಾಣೆ

ವಿರುದ್ಧ

ಆರೋಪಿಗಳು ಪ್ರತಾಪ್ ಮತ್ತು ಇತರರು

## ದೋಷಾರೋಪಣೆ

ನಾನು ಶ್ರೀ ಶಿವಪ್ರಸಾದ ಕೆ ಬಿ., ಬಿ.ಕಾಂ. ಎಲ್ ಎಲ್ ಬಿ., ನ್ಯಾಯಾಧೀಶರು, ಒಂದನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮಂಡ್ಯ ಆದ ನಾನು ನಿಮ್ಮ ಅಂದರೆ,

ಆರೋಪಿ1 : ಪ್ರತಾಪ್ ಬಿನ್ ಪುಟ್ಟಸ್ವಾಮಿ, 26 ವರ್ಷ , ಮಾದೇಗೌಡನ ಕೊಪ್ಪಲು ಗ್ರಾಮ , ಮಂಡ್ಯ ತಾಲ್ಲೂಕು.

ಆರೋಪಿ2 : ಮಹೇಶ ಎಂ.ಎಸ್. (ಮೃತರಾಗಿರುತ್ತಾರೆ).

ಆರೋಪಿ3 : ಚಂದ್ರು , 25 ವರ್ಷ , (ವಿಭಜಿಸಲ್ಪಟ್ಟಿರುತ್ತಾರೆ).

ಮಾಡುವ ದೋಷಾರೋಪಣೆ ಏನೆಂದರೆ :

ಮೊದಲನೆಯದಾಗಿ ದಿನಾಂಕ 27.04.2017 ರಂದು ರಾತ್ರಿ 9-45 ಗಂಟೆ ಸಮಯದಲ್ಲಿ ಮಂಡ್ಯ ನಗರದ ಕೆ.ಎಸ್.ಆರ್.ಟಿ.ಸಿ. ಬಸ್ಸ್ ನಿಲ್ದಾಣದ ಆವರಣದ ಮುಂಭಾಗದ ಕಟ್ಟಡದಲ್ಲಿ ಹೊಂದಿಕೊಂಡಂತೆ ಇರುವ ಐ.ಸಿ.ಐ.ಸಿ. ಬ್ಯಾಂಕಿನ ಎ.ಟಿ.ಎಂ. ಸಂಟರ್ ಬಳಿ 1 ನೇ ಆರೋಪಿಯಾದ ನೀವು ಮೃತ 2 ನೇ ಆರೋಪಿ ಹಾಗೂ ವಿಭಜಿಸಿದ ಪ್ರಕರಣದ 3 ನೇ ಆರೋಪಿಯೊಂದಿಗೆ ಸಮಾನ ಉದ್ದೇಶದಿಂದ ಸೇರಿಕೊಂಡು, ಐ.ಸಿ.ಐ.ಸಿ.ಐ. ಎ.ಟಿ.ಎಂ. ನ ಸೆಕ್ಯೂರಿಟಿ ಗಾರ್ಡ್ ಆಗಿರುವ ಚಾಸಾ-1 ರವರೊಂದಿಗೆ ಜಗಳ ತೆಗೆದು, ಬೋಳಿ ಮಗನೇ ಎಂದು ಅವಾಚ್ಯವಾಗಿ ಬೈದು, ಸಾರ್ವಜನಿಕವಾಗಿ ಅವಮಾನಿಸಿ, 1 ನೇ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ 504

ಸಹವಾಚಕ ಕಲಂ 34 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದಲ್ಲಿ ಮಾಡಿರುತ್ತೀರಿ.

ಎರಡನೆಯದಾಗಿ, ಮೇಲ್ಕಂಡ ದಿನಾಂಕ , ಸಮಯ, ಸ್ಥಳದಲ್ಲಿ 1 ನೇ ಆರೋಪಿಯಾದ ನೀವು ಮೃತ 2 ನೇ ಆರೋಪಿ ಹಾಗೂ ವಿಭಜಿಸಿದ ಪ್ರಕರಣದ 3 ನೇ ಆರೋಪಿಯೊಂದಿಗೆ ಸಮಾನ ಉದ್ದೇಶದಿಂದ ಸೇರಿಕೊಂಡು, ಚಾಸಾ-1 ರವರನ್ನು ಇವತ್ತು ಸಾಯಿಸಿ ಇಲ್ಲಿ ಹೂತು ಹಾಕೋಣ ಎಂದು ಜೀವ ಬೆದರಿಕೆ ಹಾಕಿ, 1 ನೇ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದಲ್ಲಿ ಮಾಡಿರುತ್ತೀರಿ.

ಮೂರನೆಯದಾಗಿ, ಮೇಲ್ಕಂಡ ದಿನಾಂಕ , ಸಮಯ, ಸ್ಥಳದಲ್ಲಿ 1 ನೇ ಆರೋಪಿಯಾದ ನೀವು ಮೃತ 2 ನೇ ಆರೋಪಿ ಹಾಗೂ ವಿಭಜಿಸಿದ ಪ್ರಕರಣದ 3 ನೇ ಆರೋಪಿಯೊಂದಿಗೆ ಸಮಾನ ಉದ್ದೇಶದಿಂದ ಸೇರಿಕೊಂಡು, 1 ನೇ ಆರೊಪಿಯಾದ ನೀವು ಶೇವಿಂಗ್ ಬ್ಲೇಡ್‌ನಿಂದ ಚಾಸಾ-1 ರವರ ಎಡಗೈ ತೋಳಿನ ಮೇಲೆ, ಹಣೆಯ ಬಲಭಾಗದಲ್ಲಿ ಹೊಡೆದು ಗಾಯವುಂಟುಮಾಡಿ, 1 ನೇ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ ಕಲಂ 34 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದಲ್ಲಿ ಮಾಡಿರುತ್ತೀರಿ.

ಕೊನೆಯದಾಗಿ ಮೇಲ್ಕಂಡ ದಿನಾಂಕ , ಸಮಯ, ಸ್ಥಳದಲ್ಲಿ 1 ನೇ ಆರೋಪಿಯಾದ ನೀವು ಮೃತ 2 ನೇ ಆರೋಪಿ ಹಾಗೂ ವಿಭಜಿಸಿದ ಪ್ರಕರಣದ 3 ನೇ ಆರೋಪಿಯೊಂದಿಗೆ ಸೇರಿಕೊಂಡು, ನಿಮ್ಮ ಪೈಕಿ 1 ನೇ ಆರೋಪಿಯಾದ ನೀವು ಚಾಸಾ-1 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಶೇವಿಂಗ್ ಬ್ಲೇಡ್ ನಿಂದ ಚಾಸಾ-1 ರವರ ಕತ್ತಿಗೆ ಹೊಡೆದು, ಅವರ ಕತ್ತಿನ ಬಲಗಡೆ ಏಟುಮಾಡಿದ್ದು , ನಿಮ್ಮ ಪೈಕಿ 2 ನೇ ಆರೋಪಿಯು ಸದರಿ ಬ್ಲೇಡನ್ನು ತೆಗೆದುಕೊಂಡು ಚಾಸಾ-1 ರವರ ಹೊಟ್ಟೆ ಬಳಿ ಕುಯ್ಯಲು ಯತ್ನಿಸಿದ್ದು, ಈ ರೀತಿ ಆರೋಪಿಯಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರವರನ್ನು ಕೊಲೆ ಮಾಡಲು ಪ್ರಯತ್ನಿಸಿ, 1 ನೇ ಆರೋಪಿಯಾದ ನೀವು

ನೀವು ಭಾರತೀಯ ದಂಡ ಸಂಹಿತೆ ಕಲಂ 307 ಸಹವಾಚಕ 34 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದಲ್ಲಿ ಮಾಡಿರುತ್ತೀರಿ.

ಮೇಲೆ ಹೇಳಿರುವ ದೋಷಾರೋಪಣೆ ಬಗ್ಗೆ ನಿಮ್ಮಗಳ ಮೇಲೆ ಈ ನ್ಯಾಯಾಲಯದಲ್ಲಿ ವಿಚಾರಣೆ ನಡೆಯತಕ್ಕದ್ದೆಂದು ಆದೇಶಿಸಿದ್ದೇನೆ.

ದಿನಾಂಕಃ 2 ನೇ ಪೆಬ್ರುವರಿ 2026.

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.

ಒಂದನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಂಡ್ಯ.
ಎಸ್. ಸಿ. ನಂಃ **16/2022**

ಪಿರ್ಯಾದುದಾರರು ಮಂಡ್ಯ ಪಶ್ಚಿಮ ಪೋಲೀಸ್ ಠಾಣೆ

ವಿರುದ್ಧ

ಆರೋಪಿಗಳು ಪ್ರತಾಪ್ ಮತ್ತು ಇತರರು

ಆರೋಪಿ1 : ಪ್ರತಾಪ್ ಬಿನ್ ಪುಟ್ಟಸ್ವಾಮಿ, 26 ವರ್ಷ , ಮಾದೇಗೌಡನ ಕೊಪ್ಪಲು ಗ್ರಾಮ , ಮಂಡ್ಯ ತಾಲ್ಲೂಕು.

## ದೋಷಾರೋಪಣೆ

ಪ್ರಶ್ನೆಃ 1 :ಇದೀಗ ಕನ್ನಡ ಭಾಷೆಯಲ್ಲಿ ಓದಿ ತಿಳಿಸಿ ಹೇಳಿದ ದೋಷಾರೋಪಣೆಯನ್ನು ಅರ್ಥ ಮಾಡಿಕೊಂಡಿದ್ದೀಯಾ ?

ಉತ್ತರ ಃ

ಪ್ರಶ್ನೆಃ 2 : ಮೇಲ್ಕಂಡ ದೋಷಾರೋಪಣೆಯನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆ ಆಗಬೇಕೆಂದು ಕೇಳುವೆಯಾ ?

ಉತ್ತರ ಃ

ದೋಷಾರೋಪಣೆಯನ್ನು ಆರೋಪಿಗೆ ಬಹಿರಂಗ ನ್ಯಾಯಲಯದಲ್ಲಿ ದಿನಾಂಕ ! 2 ನೇ ಪೆಬ್ರುವರಿ 2026 ರಂದು ಆರೋಪಿಗೆ ತಿಳಿಯುವ ಭಾಷೆಯಲ್ಲಿ ತಿಳಿಸಿದಾಗ, ಅವರು ನೀಡಿದ ಉತ್ತರವನ್ನು ದಾಖಲು ಮಾಡಿಕೊಂಡಿದ್ದೇನೆಂದು ದೃಢೀಕರಿಸುತ್ತೇನೆ.

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.